ಪ್ರಯತ್ನಿಸುತ್ತೇನೆ.

ಆದರೆ ಒಬ್ಬ ನಟಿಯೂ ನನ್ನ ಕನಸಿಗೆ ಆಗಮಿಸಲಿಲ್ಲ. ಸುಮಿತ್ರಾ ಮತ್ತು ಶ್ರೀದೇವಿ ಹಲವಾರು ಭಾವಗಳಲ್ಲಿ ಮುನ್ಸೂಚನೆಯೇನೂ ಇಲ್ಲದೆ ಅತಿಕ್ರಮ ಪ್ರವೇಶ ಮಾಡಿದರು.

ಹೆಚ್ಚಿಗೆ ಯಾರೊಂದಿಗೂ ಸಂಪರ್ಕವಿರಿಸದೆ ನಾನು ಕೆಲಸ ಮಾಡುವಲ್ಲಿ ಮತ್ತು ನನ್ನ ನಿವಾಸದಲ್ಲಿ ನನ್ನ ಪಾಡಿಗೆ ನಾನಿದ್ದೆ. ಕದ್ದು ಓಡಿದ ನನ್ನನ್ನು ಯಾರಾದರೂ ಪತ್ತೆ ಹಚ್ಚಿ ಬಿಡುತ್ತಾರೆಯೆ ಎಂಬ ಅಂಜಿಕೆ ನನ್ನನ್ನು ಕಾಡತೊಡಗಿತ್ತು. ವಿಷಯ ತಿಳಿಯಲು ಅಂಕಲ್‌ನ ಮುಂದೆ ತಗ್ಗಿ ಬಗ್ಗಿ ನಿಂತ ಒಬ್ಬಾತ, ಸಹಕಾರ ಬ್ಯಾಂಕ್‌ನಲ್ಲಿ ಸಾಲ ಕೇಳಿ ಬಂದು ನಾನು ಬರಿಗೈಯಲ್ಲಿ ಹಿಂದಕ್ಕೆ ಕಳುಹಿಸಿದ ಒಬ್ಬ ಯುವಕ, ನನ್ನ ಜೊತೆ ಹೈಸ್ಕೂಲಿನಲ್ಲಿ ಓದಿದ ಒಬ್ಬಾತ... ಹೀಗೆ ಯಾರಾದರೊಬ್ಬರು ನನ್ನನ್ನು ಕಂಡು ಹಿಡಿದು ಬಿಡುತ್ತಾರೆಯೆ ಎಂಬ ಶಂಕೆ ಸದಾ ನನ್ನನ್ನು ಬೇಟೆಯಾಡುತ್ತಿತ್ತು.

ನಾನು ಮಜೀದ್‌ನೊಂದಿಗೆ ಮಾತ್ರ ಹತ್ತಿರವಾಗಿದ್ದೆ. ಮಜೀದ್‌ಗೆ ಬೇರೆಯವರ ವಿಷಯದಲ್ಲಿ ತಲೆತೂರಿಸುವ ಆಸಕ್ತಿ ಇರಲಿಲ್ಲ. ಆದರೆ ಆತನ ವೈಯಕ್ತಿಕ ವಿಷಯ ಇತರರಲ್ಲಿ ಹಂಚಿಕೊಳ್ಳುವುದರಲ್ಲಿ ಯಾವ ಸಂಕೋಚವೂ ಇರಲಿಲ್ಲ. ಅವನ ಆರ್ಥಿಕ ಸಂಕಷ್ಟಗಳು, ಮನೆಯ ಜಗಳಗಳು, ವೀಸಾದ ಕಾಲಾವಧಿ, ಅರಬಿಯ ಹೆಂಡತಿಯ ಆಕರ್ಷಕ ಸೌಂದರ್ಯಗಳನ್ನೆಲ್ಲಾ ನನ್ನ ಮುಂದೆ ಒದರಿಬಿಡುತ್ತಾನೆ. ಅವಶ್ಯವಿರುವ ಪ್ರಾಯೋಗಿಕ ನಿರ್ದೇಶನ ಕೊಡುತ್ತೇನೆಂಬ ಕಾರಣಕ್ಕೆ ಅವನು ನನಗೆ ಗುರುಪಟ್ಟವನ್ನು ಕೊಟ್ಟಿದ್ದ. ರಜಾದಿನಗಳಲ್ಲಿ ನನ್ನ ಕಾರಿನಲ್ಲಿ ನಾವು ಮರುಭೂಮಿಯಲ್ಲಿರುವ ಹಸಿರನ್ನು ಅರಸುತ್ತಾ ಅಲೆಯುತ್ತೇವೆ. ಟ್ಯಾಕ್ಸಿ ಡ್ರೈವರಾಗಿದ್ದುದರಿಂದ ಮಜೀದ್‌ಗೆ ಎಲ್ಲವೂ ಚಿರಪರಿಚಿತ. ದೃಶ್ಯಗಳನ್ನು ಅವನು ಮಾತುಗಳಾಗಿ ಪರಿವರ್ತನೆಗೊಳಿಸುತ್ತಾನೆ. ಅವನ ಪಾದಗಳಲ್ಲಿ ಗಾಡಿಯ ವೇಗ, ಕೈಗಳಲ್ಲಿ ಗತಿವಿಗತಿಗಳು ಸುರಕ್ಷಿತವಾಗಿರುತ್ತಿದ್ದವು. ಊರಿಗೆ ಬಂದ ಮೇಲೆ ಟ್ಯಾಕ್ಸಿಯೊಂದನ್ನು ಕೊಂಡು ಇವನಿಗೆ ವಹಿಸಬೇಕು.

ಸ್ಟೀರಿಯೋದ ಮಂದ್ರಧ್ವನಿಯ ಮೇಲೆ ಮಜೀದ್‌ನ ಧ್ವನಿಯೂ ನಿಧಾನಕ್ಕೆ ಏರುತ್ತಿರುತ್ತದೆ. ಅದು ಕೊನೆಗೆ ಬಿಕ್ಕುವಿಕೆಯಾಗಿ ಕೊನೆಗೊಳ್ಳುತ್ತದೆ. ಹಾಡಿನ ಕೊನೆಯಲ್ಲಿ ಗಾಡಿಯನ್ನು ರಸ್ತೆಯ ಬದಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿ ಎರಡು ನಿಮಿಷ ಸ್ಟೀರಿಂಗ್ ವ್ಹೀಲಿಗೆ ಮುಖವನ್ನೊತ್ತಿ ಅಳುತ್ತಾನೆ. ಅವನ ಅಳು ಕಂಡಾಗ ನನಗೆ ಅವನ ಮೇಲೆ ಅಸೂಯೆಯುಂಟಾಗುತ್ತಿತ್ತು.

ಒಮ್ಮೆಯೂ ನನ್ನಿಂದ ಮಜೀದ್ ಹಣ ಕಡ ಪಡೆದಿಲ್ಲವೆಂಬುದು ಅವನ ವಿಶೇಷತೆ. ಊರಿಗೆ ಹೋಗುವಾಗ ಐನೂರು ಕೆ.ಡಿ.ಯನ್ನು ಅವನತ್ತ ಚಾಚಿದ್ದೆ.

'ಬೇಡಣ್ಣ, ಹಣ ನಮ್ಮಿಬ್ಬರ ನಡುವೆ ಬಂದರೆ ಸಂಬಂಧ ಕಳೆದುಹೋಗುತ್ತದೆ' ಎಂದ. ಊರಿನಿಂದ ಮರಳಿ ಬಂದಾಗ ಒಂದು ಕಾಗದದ ಪೊಟ್ಟಣದಲ್ಲಿ ಊರಿನ ತಿಂಡಿ ಪದಾರ್ಥಗಳನ್ನು ನನಗೆ ಮಾತ್ರ ತಂದುಕೊಟ್ಟ. ಊರಿನ ವಾಸನೆ ಅದರಲ್ಲಿ ತಂಗಿ ನಿಂತಿತ್ತು. ಮುಸ್ಲಿಂ ತಿಂಡಿಗಳ ರುಚಿ ಅದರಲ್ಲಿ ಅಡಗಿತ್ತು. ತಿಂಡಿ ಖಾಲಿಯಾದ ನಂತರವೂ ಆ ಕಾಗದದ ಪೊಟ್ಟಣದಿಂದ ಸುಗಂಧ ಹರಡುತ್ತಲೇ ಇತ್ತು.

ಸ್ವಂತ ಅಡುಗೆ ಮಾಡಲು ಕಲಿತೆ. ಗ್ಯಾಸ್‌ಸ್ಟೌವ್, ಸಿಲಿಂಡರ್, ಕುಕ್ಕರ್, ಕ್ರೋಕರಿಗಳೆಲ್ಲಾ ಅಡುಗೆ ಮನೆಯನ್ನು ಸೇರಿದವು. ಹೊರಹೋಗದ ದಿವಸಗಳಲ್ಲಿ ನಾನು ಮತ್ತು ಮಜೀದ್ ಹೊಸ ಹೊಸ ರೆಸಿಪಿಗಳನ್ನು ತಯಾರಿಸಿದೆವು. ಆಕಸ್ಮಿಕವಾಗಿ ಕೆಲವೊಮ್ಮೆ ಕೆಲವು ರೆಸಿಪಿಗಳಿಗೆ ಅಸಾಮಾನ್ಯ ರುಚಿಯಿರುತ್ತಿತ್ತು.

ಅನಿರೀಕ್ಷಿತವಾಗಿ ಯುದ್ಧ ಘೋಷಿಸಲ್ಪಟ್ಟಿತು. ಬೆಳಿನಾಶದ ಮಿಡತೆಗಳಂತೆ ಅದು ಇದ್ದಕ್ಕಿದ್ದಂತೆ ಒಂದು ದಿನ ಬಂದೆರಗಿತು.

ಒಂದು ದಿನ ನಾನು ಕೃತಕ ಚಳಿಯನ್ನು ಬಲವಂತವಾಗಿ ಅನುಭವಿಸುತ್ತಿದ್ದೆ. ಕನಸಿನಲ್ಲಿ ರಂಗ ಪ್ರಜ್ಞೆಯಿಲ್ಲದ ಯಾರ್ಯಾರೋ ಬಂದು ಹೋದರು. ಜನರಹಿತವಾದ ಒಂದು ವೇದಿಕೆಯಾಗಿ ಕನಸಿನ ರಂಗಮಂಚ ಬದಲಾಗಿತ್ತು. ಆಗಲೇ ಕನಸಿನ ಪರದೆಯನ್ನೆಳೆದು ನಾನು ಕಣ್ಣುಜ್ಜುತ್ತಾ ಎಚ್ಚರಗೊಂಡೆ.

ಕೋಣೆ ತುಂಬಾ ಬೆಳಕು ತುಂಬಿತ್ತು. ನಾನು ತುಂಬಾ ಹೊತ್ತು ನಿದ್ರಿಸಿಬಿಟ್ಟಿದ್ದೆ. ಕರೆಗಂಟೆಯ ಸದ್ದಿಗೆ ನಾನು ಎಚ್ಚರಗೊಂಡಿದ್ದೆಂದು ಮತ್ತೆ ಮತ್ತೆ ಮೊಳಗಿದ ಗಂಟೆಯ ನಾದ ನನ್ನನ್ನು ಜ್ಞಾಪಿಸಿತು. ಓಡಿಹೋಗಿ ಬಾಗಿಲು ತೆರೆದಾಗ ನನ್ನ ಮುಂದೆ ಬೆವರಿನಿಂದ ತೊಯ್ದು ತೊಪ್ಪೆಯಾದ ಮಜೀದ್ — ನನ್ನ ಏಕೈಕ ಗೆಳೆಯ.

'ಏನಾಯಿತು ಮಜೀದ್?' ನಾನು ಕೇಳಿದೆ.

'ಇಕ್ಕಾ (ಅಣ್ಣಾ) ಎಲ್ಲಾ ಗೊಂದಲಮಯ. ನಾವೀಗ ಇರೋದು ಕುವೈಟ್‌ನಲ್ಲಲ್ಲ, ಇರಾಕಿನಲ್ಲಿ' ಇವನೇನು ಹೇಳ್ತಾ ಇದ್ದಾನೆ? ಹಾಗಾದರೆ, ನನ್ನ ಕೋಣೆಯಿರುವ ಈ ದೊಡ್ಡ ಕಟ್ಟಡ ಇಲ್ಲಿಗೆ ಬಂದಿದ್ದಾದರೂ ಹೇಗೆ? ಯಕ್ಷಿ ಕತೆಯಲ್ಲಿ ಬರುವಂತೆ ರೆಕ್ಕೆ ಬಡಿಯುತ್ತಾ ಹಾರುತ್ತಾ ಬಂದಿದ್ದೇನು?

'ಮಜೀದ್, ಏನಾಗಿದೆ ನಿನಗೆ? ನೀನು ಏನು ಹೇಳ್ತಾ ಇದ್ದೀಯ?'

'ಇಕ್ಕಾ, ಇರಾಕಿಗಳು ನಮ್ಮನ್ನು ಸುತ್ತುವರಿದಿದ್ದಾರೆ. ಮುಖ್ಯರಸ್ತೇಲಿ, ಏರ್‌ಪೋರ್ಟ್‌ನಲ್ಲಿ, ಸ್ಟೋರ್‌ಗಳ ಮುಂದೆಯೆಲ್ಲಾ ಅವರು ಬಂದೂಕು ಹಿಡಿದು ನಿಂತಿದ್ದಾರೆ. ಎಲ್ಲೋ ಬಾಂಬ್ ಹಾಕಿದ್ದಾರಂತೆ. ಎಲ್ಲರೂ ಎಲ್ಲೆಲ್ಲೋ ಬಚ್ಚಿಟ್ಟುಕೊಂಡಿದ್ದಾರಂತೆ. ನಾವು ಕೂಡ ಜೀವ ಕಾಪಾಡ್ಕೊಬೇಕಿದೆ. ಜೀವ ಉಳಿದರೆ ಜೀವನ. ನನ್ನ ವಿಷಯ ಬಿಡಿ, ನಾನು ನೋಡ್ಕೊಳ್ತೀನಿ.'

ಹೇಳಿ ಮುಗಿಸಿದ್ದೇ ತಡ, ಮಜೀದ್ ಅರಬೀಕತೆಯ ಭೂತದಂತೆ ಅದೆಲ್ಲೋ ಮಾಯವಾದ. ನಾನು ಕಿಟಕಿಯಿಂದ ಕೆಳಕ್ಕೆ ನೋಡಿದೆ. ರಸ್ತೆಯಲ್ಲಿ ಆರದ ವಿದ್ಯುತ್ ದೀಪದ ಬೆಳಕಿನಲ್ಲಿ ಇರಾಕೀ ಸೈನಿಕರು ಗಸ್ತು ತಿರುಗುತ್ತಿದ್ದರು.

ನಾನಿದ್ದ ಕಟ್ಟಡದಲ್ಲಿ ಬಹುತೇಕರು ಪ್ಯಾಲಸ್ತೀನಿಯರು. ಅವರು ಗೂಡಿಲ್ಲದ ಹಕ್ಕಿಗಳು. ಸ್ವಂತ ನಾಡಿನ ಕನಸು ಕಾಣುತ್ತಾ ತಾತ್ಕಾಲಿಕ ತಾಣಗಳಲ್ಲಿ ದಿನದೂಡುತ್ತಿದ್ದಾರೆ. ತಮ್ಮ ತಮ್ಮ ಗೂಡಿಗೆ ಮರಳಲು ಇರಾಕಿಗಳು ನೆರವಾಗುತ್ತಾರೆಂಬ ನಿರೀಕ್ಷೆಯಿಂದ ಅವರೊಂದಿಗೆ ಸೌಹಾರ್ದ ಸಂಬಂಧವನ್ನು ಉಳಿಸಿಕೊಂಡಿದ್ದಾರೆ.

ಪ್ಯಾಲಸ್ತೀನಿ ಸುಂದರಿಯರನ್ನು ಸುಂದರರನ್ನು ಊರಿಗೆ ಕರೆದುಕೊಂಡು ಹೋಗಿ ಅವರಿಗೊಂದು ನಿರಾಶ್ರಿತರ ಕಾಲೊನಿಯನ್ನು ಸಜ್ಜುಗೊಳಿಸಿದರೆ ಹೇಗೆ ಎಂದು ನಾನು ಅನೇಕ ಸಲ ಯೋಚಿಸಿದ್ದುಂಟು. ಬೇರೇನಕ್ಕೂ ಅಲ್ಲ. ಕಾಲೊನಿಯ ಮಧ್ಯದಲ್ಲಿ ಒಂದು ಮನೆಯನ್ನು ಕಟ್ಟಿ ದಿನವೂ ಇವರ ಸೌಂದರ್ಯವನ್ನು ಸವಿಯಬಹುದಲ್ಲವೆ?

ಪ್ಯಾಲಸ್ತೀನಿಗಳನ್ನು ಇರಾಕಿಗಳು ಉಪದ್ರವಿಸುವುದಿಲ್ಲವಾದ್ದರಿಂದ ನನ್ನ ಫ್ಲಾಟಿಗೆ ಸದ್ಯಕ್ಕೆ ಯಾವುದೇ ಬೆದರಿಕೆಯಿಲ್ಲ. ನನ್ನ ಪ್ರಾಯೋಗಿಕ ಮನಸ್ಸು ತಕ್ಷಣ ಕಾರ್ಯಪ್ರವರ್ತವಾಯಿತು. ಆಹಾರದ ಡಬ್ಬಿಗಳು, ಗ್ಯಾಸ್‌ಸಿಲಿಂಡರ್ ಎಲ್ಲಾ ಖಾಲಿಯಾಗತೊಡಗಿದೆ. ಪಕ್ಕದ ಫ್ಲಾಟಿನ ಒಬ್ಬ ಪ್ಯಾಲಸ್ತೀನ್ ವೃದ್ಧನನ್ನು ಕರೆದುಕೊಂಡು ನಾನು ಟೊಯಾಟೊ ಹತ್ತಿದೆ. ಕಾರು ಸ್ಟೋರ್‌ನತ್ತ ಸಾಗಿತು. ದಾರಿಯಲ್ಲಿ ಕಂಡ ಮಿಲಿಟರಿ ಯೋಧನಿಗೆ ಪ್ಯಾಲಸ್ತೀನಿನ ಡ್ರೈವರೆಂದು, ಅವರಿಗೆ ಔಷಧಿ ತರಲು ಹೋಗುತ್ತಿದ್ದೇನೆಂದು ಹೇಳಿದೆ. ನಿಜವಾಗಲೂ ಆ ವೃದ್ಧನಿಗೆ ಔಷಧಿಯ ಅಗತ್ಯವಿತ್ತು. ಎರಡು ವಾರಕ್ಕಾಗುವಷ್ಟು ಔಷಧಿ ಮತ್ತು ಆಹಾರ ಸಾಮಗ್ರಿಗಳನ್ನು ಅವರಿಗೆ ತೆಗೆಸಿಕೊಟ್ಟೆ. ಸಿಲಿಂಡರ್ ತುಂಬಿ, ಎರಡು ವಾರಕ್ಕಾಗುವಷ್ಟು ಅತ್ಯಾವಶ್ಯಕ ವಸ್ತುಗಳನ್ನು ಟೊಯಟೋಗೆ ತುಂಬಿ ತಕ್ಷಣ ಫ್ಲಾಟಿಗೆ ಹಿಂತಿರುಗಿದೆ.

ಅಷ್ಟಾಗಿ ಪರಿಚಯವಿಲ್ಲದವರೂ ನನಗೆ ಫೋನ್ ಮಾಡತೊಡಗಿದರು. ಅವರೆಲ್ಲಾ ತಮ್ಮ ತಮ್ಮ ಊರಿಗೆ ಹೊರಡಲು ಸಿದ್ಧರಾಗುತ್ತಿದ್ದರು. ಮಜೀದ್ ಕೂಡ ತಯಾರಾಗತೊಡಗಿದ. ಕೊಂಡು ತಂದ ಆಹಾರ ಪದಾರ್ಥಗಳು ಮುಗಿಯುವವರೆಗೆ ನಾನಿಲ್ಲಿ ಕ್ಷೇಮವಾಗಿರುತ್ತೇನೆ. ಅನಂತರದ ವಿಷಯ ಆಮೇಲೆ ತಾನೆ? ಆಗ ಯೋಚಿಸಿದರೆ ಸಾಕು.

ಮಿಲಿಟರಿಯವರು ಮನೆಗಳಿಗೆ ನುಗ್ಗಿ ಕೊಳ್ಳೆ ಹೊಡೆಯುತ್ತಿದ್ದಾರೆಂದು ಕೇಳಿಸಿಕೊಂಡೆ. ಬಹುತೇಕ ಮಲಯಾಳಿಗಳು ಸಿಕ್ಕಿದ್ದನ್ನು ಎತ್ತಿಕೊಂಡು ಊರಿಗೆ ಹಾರಿದರು. ಕೇಸಟ್ಟುಗಳನ್ನು ನೋಡುತ್ತಲೂ, ಆಹಾರ ಸೇವಿಸುತ್ತಲೂ ಆಗಾಗ ಕಿಟಕಿಯ ಮೂಲಕ ಹೊರಗೆ ನೋಡುತ್ತಾ ಹೇಗೇಗೋ ಒಂದು ವಾರ ಕಳೆದೆ. ಬಾಂಬರ್ ವಿಮಾನಗಳು ನಾನಿದ್ದ ಕಟ್ಟಡದ ಪಕ್ಕದಿಂದ ಅನೇಕ ಸಲ ಹಾರಾಡಿದವು.

ಬ್ಯಾಂಕಿನ ಮೇಲೆ ಬಾಂಬು ಬೀಳುವ ಹಿಂದಿನ ದಿನ ನಾನು ಬ್ಯಾಂಕಿಗೆ ಹೋಗಿದ್ದೆ. ಜನಸಂದಣಿಯನ್ನು ಕಂಡು ಮರುದಿನ ಹೋಗೋಣವೆಂದು ಮರಳಿಬಂದಿದ್ದೆ. ಆದರೆ ಮರುದಿನ ಬ್ಯಾಂಕ್ ಕಟ್ಟಡ ಒಡೆದು ಚೆಲ್ಲಾಪಿಲ್ಲಿಯಾಗುವುದನ್ನು ಟೀವಿಯಲ್ಲಿ ನೋಡಬೇಕಾಯಿತು.

(ಸಶೇಷ)